ದಿನಾಂಕ 04-11-2023 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಸ್.ಆರ್ ವಕೀಲರಿಂದ ಶ್ರೀ ಜಿ.ಪಿ.ಎಸ್ ವಕೀಲರ ಪರವಾಗಿ**

1) ಈಗ ನಾನು ಸಾಗರ ತಾಲೂಕಿನ ಉಳ್ಳೂರು ಗ್ರಾಮದಲ್ಲಿ ವಾಸವಾಗಿದ್ದೇನೆ. ನಾನು 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಉಳ್ಳೂರಿನಿಂದ ಓಡಾಡಿಕೊಂಡು ಇದ್ದೆನು. ಈಗ ನಾನು ಉಳ್ಳೂರಿನಲ್ಲಿಯೇ ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ನಾನು 2012 ನೇ ಸಾಲಿನಲ್ಲಿ 2 ನೇ ಪಕ್ಷಗಾರ ಕಾರ್ಖಾನೆಯ ಕೆಲಸಕ್ಕೆ ಸೇರಿಕೊಂಡಿದ್ದೇನೆ. ಕಾರ್ಖಾನೆಯಯವರು ನನಗೆ ನೇಮಕಾತಿ ಆದೇಶ ಕೊಟ್ಟಿರುವುದಿಲ್ಲ. ನನ್ನ ಪರಿಚಯದವರು ಹೇಳಿದ್ದರಿಂದ ನಾನು 2 ನೇ ಪಕ್ಷಗಾರ ಕಾರ್ಖಾನೆಯ ಕೆಲಸಕ್ಕೆ ಸೇರಿಕೊಂಡಿದ್ದೇನೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ.

2) ಕೆಲಸಕ್ಕೆ ಸೇರಿಕೊಂಡಾಗ ನನಗೆ ತರಬೇತಿ ಅವಧಿಯಲ್ಲಿ 3 ತಿಂಗಳು ಪ್ರತಿದಿನ ರೂಪಾಯಿ 125 ದಿನಗೂಲಿ ಕೊಡುತ್ತಿದ್ದು, ನಂತರ ಪ್ರತಿದಿನಕ್ಕೆ ರೂಪಾಯಿ 500 ರಂತೆ ಕೂಲಿ ಕೂಡುತ್ತಿದ್ದರು. ಕೆಲಸಕ್ಕೆ ಹೋಗದೇ ಇದ್ದಲ್ಲಿ ದಿನಗೂಲಿ ಕೊಡುತ್ತಿರಲಿಲ್ಲ. ನಾನು ಕಾರ್ಖಾನೆಯಲ್ಲಿ ಒಡೆದ ತೆಂಗಿನಕಾಯಿ ಹಸಿ ಕೊಬ್ಬರಿಯ ಮೇಲಿನ ಕಪ್ಪು ತೊಗಟೆಯನ್ನು ತೆಗೆದುಕೊಡುವ ಕೆಲಸ ನನ್ನದು ಇತ್ತು. ಸದರಿ ಕಾರ್ಖಾನೆಯಲ್ಲಿ ತೆಂಗಿನಕಾಯಿ ಪುಡಿ ತಯಾರಿಸುತ್ತಿದ್ದರು. ಕಾರ್ಖಾನೆಯಲ್ಲಿ ಬೇರೆ ಕೆಲಸದ ಇರದೇ ಇದ್ದಾಗ ಹೆಣ್ಣು ಮಕ್ಕಳಿಗೆ ಮಾತ್ರ ಸ್ವಚ್ಚತೆಯ ಕೆಲಸಕ್ಕೆ ಕರೆಯುತ್ತಿದ್ದರು. ಸದರಿ ಕಾರ್ಖಾನೆಯಲ್ಲಿ 40 ರಿಂದ 70 ಜನ ಕೆಲಸ ಮಾಡುತ್ತಿದ್ದರು. ಕಾರ್ಖಾನೆಗೆ ಪ್ರತಿದಿನ 75 ಜನ ಕೆಲಸಕ್ಕೆ ಬರುತ್ತಿದ್ದರು. ಕೆಲಸದ ಒತ್ತಡ ಇದ್ದಾಗ ಮಾತ್ರ ಎಲ್ಲಾ ಕಾರ್ಮಿಕರಿಗೆ ಕರೆಯುತ್ತಿದ್ದು ಕಡಿಮೆ ಕೆಲಸ ಇದ್ದಾಗ ಎಲ್ಲರಿಗೆ ಬರಲು ಹೇಳುತ್ತಿರಲಿಲ್ಲ. ನಾನು ಪೀಸ್ ವರ್ಕ ಕೆಲಸದಲ್ಲಿ ಇದ್ದಾಗ 1 ಸಾವಿರ ತೆಂಗಿನಕಾಯಿಯ ಕೊಬ್ಬರಿ ಸ್ವಚ್ಚ ಮಾಡಿ ಕೊಟ್ಟಲ್ಲಿ ನನಗೆ ರೂಪಾಯಿ 350.00 ದಿನಕೂಲಿ ಕೊಡುತ್ತಿದ್ದು ನಾನು ದಿನಕ್ಕೆ 1500 ತೆಂಗಿನಕಾಯಿ ಸ್ವಚ್ಚ ಮಾಡಿಕೊಡುತ್ತಿದ್ದೆನು.

3) ಕಾರ್ಖಾನೆಗೆ ಕೆಲಸಕ್ಕೆ ಹೋದಾಗ ಪ್ರತಿದಿನ ಹಾಜರಿಗೆ ಸಹಿ ಮಾಡುತ್ತಿದ್ದೆವು. ಕೆಲಸ ಮಾಡಿದ ದಿನದ ದಿನಗೂಲಿಯನ್ನು ಕಾರ್ಖಾನೆಯವರು ಬಾಕಿ ಇಟ್ಟುಕೊಳ್ಳದೇ

ಪಾವತಿಸಿದ್ದಾರೆ. ನನ್ನ ಅರ್ಜಿ ಬರೆಯಲು ಸಂಘಟನೆಯ ಪದಾಧಿಕಾರಿ ಮಾಹಿತಿ ಕೊಟ್ಟಿರುತ್ತಾರೆ. ನನ್ನ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ದಿನಾಂಕ 16-04-2011 ರಿಂದ 08-07-2019 ರವರೆಗೆ ಕಾರ್ಖಾನೆಯಲ್ಲಿ ಕೆಲಸ ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಮಾಸಿಕ ರೂಪಾಯಿ 21,000.00 ಸಂಬಳ ಪಡೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

4) 2 ನೇ ಪಕ್ಷಗಾರ ಕಾರ್ಖಾನೆಯು ಯಾವ ಕಾರಣಕ್ಕೆ ಮುಚ್ಚಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಿಚಾರಿಸಿದಾಗ ಕಾರ್ಖಾನೆಯವರು ಏಕೆ ಮುಚ್ಚಿದ್ದೇವೆ ಎಂದು ಹೇಳಿರುವುದಿಲ್ಲ. ನಾನು ಕಾರ್ಖಾನೆ ಮುಚ್ಚುವ ಕಾಲಕ್ಕೆ ಕೆಲಸ ಮಾಡದೇ ಇದ್ದ ಕಾರಣ ಯಾವ ಕಾರಣಕ್ಕೆ ಕಾರ್ಖಾನೆ ಮುಚ್ಚಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆಯವರು ನಮ್ಮನ್ನು ವಜಾ ಮಾಡಿರುವುದಿಲ್ಲ. ನಾನು ಸಂಘಟನೆ ಮೂಲಕ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಸದರಿ ಅರ್ಜಿಗೆ ನಾನು ಸಹಿ ಮಾಡಿರುವುದಿಲ್ಲ. ಅರ್ಜಿ ಕೊಡುವ ಸಮಯಕ್ಕೆ ನಾನು ಕಾರ್ಮಿಕ ಇಲಾಖೆಯ ಕಚೇರಿಗೆ ಹೋಗಿಲ್ಲ ಎನ್ನುವುದು ಸರಿಯಲ್ಲ. ನಾನು ಅರ್ಜಿ ಕೊಡಲು ಕಾರ್ಮಿಕ ಸಂಘಟನೆಯ ಕಚೇರಿಗೆ ಹೋಗಿರುತ್ತೇನೆ. ಕಾರ್ಮಿಕ ಇಲಾಖೆಯ ಕಚೇರಿಗೆ ಹೋಗಿರುವುದಿಲ್ಲ. ಸದರಿ ಅರ್ಜಿಯಲ್ಲಿ ಯಾವ ಕಾರಣಕ್ಕೆ ಪರಿಹಾರ ಬೇಕು ಎಂದು ಉಲ್ಲೇಖ ಮಾಡಿದೆ ಎಂದು ನನಗೆ ಗೊತ್ತಿರುವುದಿಲ್ಲ.

5) ನಾನು ಕಾರ್ಮಿಕ ಇಲಾಖೆಗೆ ಅರ್ಜಿ ಕೊಡುವ ಮೊದಲು 2 ನೇ ಪಕ್ಷಗಾರ ಕಾರ್ಖಾನೆಯ ಮಾಲೀಕರಿಗೆ ಭೇಟಿಯಾಗಿ ವಿಚಾರಣೆ ಮಾಡಿರುವುದಿಲ್ಲ. 2 ನೇ ಪಕ್ಷಗಾರ ಕಾರ್ಖಾನೆಯವರು ನನಗೆ ಯಾವುದೇ ಮೊತ್ತ ಪಾವತಿಸಲು ಬಾಕಿ ಇರದ ಕಾರಣ ನಾನು ಅವರನ್ನು ವಿಚಾರಿಸಿಲ್ಲ ಎನ್ನುವುದು ಸರಿ ಇದೆ. ನಾನು ಕಾರ್ಖಾನೆಯ ಕಾರ್ಮಿಕಳು ಇರದ ಕಾರಣ ನನ್ನ ಹೆಸರಿನಲ್ಲಿ ಭವಿಷ್ಯ ನಿಧಿ ಖಾತೆ ತೆಗೆಯಲಿಲ್ಲ ಎನ್ನುವುದು ಸರಿಯಲ್ಲ. ಭವಿಷ್ಯ ನಿಧಿ ಖಾತೆ ಇರದ ಕಾರಣ ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ಭವಿಷ್ಯ ನಿಧಿ ಖಾತೆ ಕೊಟ್ಟಿರುವೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

6) ನಾನು ಕಾರ್ಖಾನೆಗೆ ಬಹಳ ವರ್ಷಗಳ ಹಿಂದೆ ರಾಜೀನಾಮೆ ಪತ್ರ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಕಾರಣ ಕಾರ್ಖಾನೆಯವರು ನನ್ನ ಹೆಸರಿನಲ್ಲಿ ಭವಿಷ್ಯ ನಿಧಿ ಖಾತೆ ಆರಂಭಿಸಿಲ್ಲ ಎನ್ನುವುದು ಸರಿಯಲ್ಲ. ನಾನು ರಾಜೀನಾಮೆ ಕೊಟ್ಟ ಕಾರಣ ಕಾರ್ಖಾನೆಯವರು ನನ್ನನ್ನು ಮತ್ತೆ ಕೆಲಸಕ್ಕೆ ಕರೆಯಲಿಲ್ಲ ಎನ್ನುವುದು ಸರಿಯಲ್ಲ.

7) ನಾನು ಕಾರ್ಮಿಕ ವಿಮಾ ಯೋಜನೆಯ ಕುರಿತಾದ ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಕಾರ್ಮಿಕ ವಿಮಾ ಯೋಜನೆಯ ದಾಖಲೆಯಲ್ಲಿ ನಾನು ದಿನಾಂಕ 01-05-2016 ರಂದು ಕೆಲಸಕ್ಕೆ ಸೇರಿಕೊಂಡಿದ್ದೇನೆ ಎಂದು ಉಲ್ಲೇಖ ಇರುತ್ತದೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ದಿನಾಂಕ 01-12-2016 ರಂದು ನಾನು ಕಾರ್ಮಿಕ ವಿಮಾ ಯೋಜನೆಯಲ್ಲಿ ನೊಂದಣಿ ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ವಿಮಾ ಯೋಜನೆಯು ದಿನಾಂಕ 30-12-2016 ರವರೆಗೆ ಮಾತ್ರ ಉರ್ಜಿತ ಇತ್ತು ಎನ್ನುವುದು ಸರಿಯಲ್ಲ. ಸದರಿ ದಾಖಲೆಯ ಪ್ರಕಾರ ನಾನು ಕೇವಲ 6 ತಿಂಗಳು ಮಾತ್ರ 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ದಿನಗೂಲಿ ನೌಕರನಾಗಿದ್ದರೂ ಸಹ ಕಾರ್ಖಾನೆಯವರು ಮಾನವೀಯತೆಯ ನೆಲೆಯಲ್ಲಿ ನನಗೆ ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯ ಒದಗಿಸಿದ್ದರು ಎನ್ನುವುದು ಸರಿಯಲ್ಲ.

8) ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟು ಎಲ್ಲಾ ಸೌಲಭ್ಯವನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಯಲ್ಲಿ 2012 ರಿಂದ 2019 ರವರೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆಂದು ತೋರಿಸುವುದಿಲ್ಲ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ.

9) 2019 ರಲ್ಲಿ 2 ನೇ ಪಕ್ಷಗಾರ ಕಾರ್ಖಾನೆ ನಷ್ಟವಿದ್ದ ಕಾರಣ ಮುಚ್ಚಿ ಹೋಗಿತ್ತು ಎನ್ನುವುದು ಸರಿಯಲ್ಲ. ಸದರಿ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿತ್ತು ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚುವ ಕಾಲಕ್ಕೆ ನಾನು ಅಲ್ಲಿಯೇ ಕೆಲಸ ಮಾಡುತ್ತಿರದ ಕಾರಣ ಅದು ನಷ್ಟದಲ್ಲಿ ಇತ್ತು ಎಂದು ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ನಾನು ರಾಜೀನಾಮೆ ಕೊಟ್ಟು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ಕಾರ್ಖಾನೆ ಮುಚ್ಚುವ ಕಾಲಕ್ಕೆ ನನಗೆ ನೋಟಿಸು ಕೊಡುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯವರಿಗೆ ಸಂಪರ್ಕಿಸಿ ಕೆಲಸ ಕೊಡು ಎಂದು ಕೇಳಿಯೇ ಇಲ್ಲ ಎನ್ನುವುದು

ಸರಿಯಲ್ಲ. ಕಾರ್ಖಾನೆ ಮುಚ್ಚಿದ್ದ ಬಗ್ಗೆ ತಿಳಿದ ನಂತರ ಅಕ್ರಮವಾಗಿ ದುರ್ಲಾಭ ಪಡೆಯಲೆಂದು ನಾನು ಈ ಅರ್ಜಿ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಬೇರೆಯವರ ಕುಮ್ಮಕ್ಕಿನಿಂದ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆ ಮುಚ್ಚಿದ್ದ ಸಮಯದಲ್ಲಿ ಕೆಲಸ ಮಾಡದೇ ಇದ್ದ ಕಾರಣ ಮತ್ತು ಕಾರ್ಮಿಕನಿರದ ಕಾರಣ 3 ತಿಂಗಳ ಸಂಬಳ ಪಡೆಯುವ ಯಾವುದೇ ಅರ್ಹತೆ ನನಗೆ ಇಲ್ಲ ಎನ್ನುವುದು ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯುವ ಅರ್ಹತೆ ನನಗೆ ಇಲ್ಲ ಎನ್ನುವುದು ಸರಿಯಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತದೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯಿಂದ ಎಲ್ಲಾ ಸೌಲಭ್ಯ ಪಡೆದಿರುವ ಕಾರಣ ಹಾಗೂ ನಿರಂತರ ಕಾರ್ಮಿಕನಿರದ ಕಾರಣ ನನಗೆ ಗ್ರ್ಯಾಚ್ಯುಟಿ ಪಡೆಯವ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ಕಾರ್ಮಿಕ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ, ಉಡುಪಿ